ಓಎಸ್ 367/2016

**ಡಿ.ಡಬ್ಲ್ಯೂ: 01**

ದಿನಾಂಕಃ 30.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀಸವಾಲು ವಾದಿ ಪರ ಶ್ರೀ ಎಸ್ ಎನ್ ಎಲ್ ವಕೀಲರಿಂದಃ**

ದಾವಾ ಸ್ವತ್ತು ಪಂಚಾಯತಿಗೆ ಸೇರುತ್ತದೆ, ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಮುದಾಯದವರು ಪ್ರಮಾಣಪತ್ರವನ್ನು ಬರೆಸಿರುತ್ತಾರೆ, ನಾನು ಅದಕ್ಕೆ ಕೇವಲ ಸಹಿಯನ್ನು ಹಾಕಿರುತ್ತೇನೆ ಎಂದರೆ ಸರಿ. ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂಬ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ನನಗೆ ದಾವಾಸ್ತಿಗೆ ಸಂಬಂಧಪಟ್ಟಂತೆ ಸಂಪೂರ್ಣ ಮಾಹಿತಿ ಇರುವುದಿಲ್ಲ, ವಿಷಯಗಳನ್ನು ತಿಳಿದುಕೊಳ್ಳದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪಂಚಾಯತಿಗೆ ಸೇರಿದ್ದರೆ ಅಧಿಕೃತ ಜ್ಞಾಪನ ಪತ್ರವನ್ನು ಮಾಡಿ ಸ್ವತ್ತಿನ ಸಂಖ್ಯೆ ಜಂಜರ್ ನಂಬರನ್ನು ನೀಡುತ್ತಿದ್ದರು ಎಂದರೆ ಸರಿ. ಇದಕ್ಕೆ ಸಂಬಂಧಪಟ್ಟಂತೆ ಸ್ವತ್ತಿನ ಸಂಖ್ಯೆ ಹಾಗೂ ಜ್ಞಾಪನ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಭಾವಚಿತ್ರಗಳನ್ನು ನೀಡಿರುತ್ತೇನೆ ಎಂದು ಉತ್ತರಿಸುತ್ತಾರೆ. ವಾದಿ ದಾವಾಸ್ತಿನಲ್ಲಿ ಸ್ವಾಧೀನದಲ್ಲಿಲ್ಲ ಎಂದು ಹೇಳಲು ಸಾಕ್ಷಿದಾರರು ಇದ್ದಾರಾ ಎಂದರೆ ಸಾಕ್ಷಿ ನಾನೇ ನುಡಿಯುತ್ತೇನೆಂದು ಉತ್ತರಿಸುತ್ತಾರೆ. ದಾವಾಸ್ವತ್ತಿನಲ್ಲಿ ನಲ್ಲಿ ಇದೆ ಎಂದರೆ ಸರಿಯಲ್ಲ. ದಾವಾಸ್ವತ್ತು ಮೂಕನಹಳ್ಳಿ ಗ್ರಾಮಪಂಚಾಯತಿಗೆ ಸೇರಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದು ಅದನ್ನು **ನಿಪಿ6** ಎಂದು ಗುರುತಿಸಲಾಯಿತು.

ನಾನು ನನ್ನ ಪ್ರಮಾಣಪತ್ರದ 3 ನೇ ಕಂಡಿಕೆಯ 2 ನೇ ಪುಟದಲ್ಲಿ ಮಂಗಳಮ್ಮ ಕೋಂ ಲೋಕೇಶ್ ಎನ್ನುವವರು ಮಾರಾಟ ಮಾಡಿದ್ದು ಎಂದು ಹೇಳಿದ್ದು ಸದರಿ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನಿಪಿ6 ನ್ನು ಮೂಕನಹಳ್ಳಿ ಗ್ರಾಮಪಂಚಾಯತಿಯವರು ನೀಡಿದ್ದರೂ ಸಹ ನಾನು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತು ಪಂಚಾಯತಿಗೆ ಸೇರಿದ್ದರೆ ಅವರೇ ಪ್ರಶ್ನಿಸುತ್ತಿದ್ದರು, ದಾವಾಸ್ವತ್ತನ್ನು ಕಬಳಿಸುವ

ಉದ್ದೇಶದಿಂದ ಹಾಗೂ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಕುಡಿಯುವ ಟ್ಯಾಂಕ್ ಇರುವ ವಿಚಾರ ಹೇಳಿದ್ದು ಅದರ ಬಗ್ಗೆ ಪಂಚಾಯತಿಯವರು ನೀಡಿದ ಆದೇಶದ ಪ್ರತಿ ಇರುವುದಿಲ್ಲ. ವಾದಿಗೆ ಸೇರಿರುವ ಜಾಗವನ್ನು ನಾನು ಮತ್ತು ಇತರೆ ಪ್ರತಿವಾದಿಗಳು ಸಾರ್ವಜನಿಕರ ಸ್ಥಳ ಎಂದು ಹೇಳಿ ವಾದಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ 2 ಭಾವಚಿತ್ರಗಳನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದು ಅವುಗಳನ್ನು **ನಿಪಿ7 ಮತ್ತು 8** ಎಂದು ಗುರುತಿಸಲಾಯಿತು. ಪ್ರತಿವಾದಿಗಳು ತೊಂದರೆ ನೀಡುತ್ತಿದ್ದಾರೆಂದು ವಾದಿ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ3 ನ್ನು ತೋರಿಸಿದ್ದು ಸಾಕ್ಷಿ ಅದನ್ನು ಒಪ್ಪಿರುವುದಿಲ್ಲ. ಸಾಕ್ಷಿಗೆ ನಿಪಿ1 ನ್ನು ತೋರಿಸಲಾಗಿ ಮೂಕನಹಳ್ಳಿ ಗ್ರಾಮಪಂಚಾಯತಿಯವರು ವಾದಿಗೆ ನೀಡಿರುವ ಡಿಮ್ಯಾಂಡ್ ರೆಜಿಸ್ಟರ್ ಎಂದರೆ ಸಾಕ್ಷಿ ವಾದಿ ಈಗ ಹಾಲಿ ವಾಸವಾಗಿರುವ ಮನೆಯ ಡಿಮ್ಯಾಂಡ್ ರೆಜಿಸ್ಟರ್ ಎಂದು ಉತ್ತರಿಸುತ್ತಾರೆ. ನಿಪಿ2 ನ್ನು ತೋರಿಸಲಾಗಿ ಸಾಕ್ಷಿ ವಾದಿ ಈಗ ಹಾಲಿ ವಾಸವಾಗಿರುವ ಮನೆಯ ಕಂದಾಯ ರಶೀದಿ ಎಂದು ಉತ್ತರಿಸುತ್ತಾರೆ.

ನನಗೆ ದಾವಾಸ್ತಿಗೆ ಸಂಬಂಧಪಟ್ಟಂತೆ ಸಂಪೂರ್ಣವಾದ ಮಾಹಿತಿ ಇರುವುದಿಲ್ಲ, ವಾದಿ ಮೇಲಿರುವ ವೈಯಕ್ತಿಕ ದ್ವೇಷದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿ ಯಾರ ಹೆಸರಿನಲ್ಲಿ ಇರುವುದು ಎಂದು ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿ ಯಾರ ಹೆಸರಿನಲ್ಲಿಯೂ ಇಲ್ಲ, ಗ್ರಾಮ ಠಾಣಾ ಆಸ್ತಿ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ಯಾವುದಾದರೂ ಒಂದು ಸ್ವತ್ತು ಇದ್ದರೆ ಅದಕ್ಕೆ ಚೆಕ್ಕುಬಂಧಿ ಹಾಗೂ ವಿಸ್ತೀರ್ಣ ನಿಗಧಿತವಾಗಿರುತ್ತದೆ ಎಂದರೆ ಸರಿ. ನಾನು ಯಾವುದೇ ದಾಖಲಾತಿಗಳನ್ನು ಪರಿಶೀಲಿಸದೇ ವಾದಿಗೆ ಸೇರಿರುವ ದಾವಾಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಟ್ಯಾಂಕ್ ಇದ್ದರೆ ಅದಕ್ಕೆ ಸಂಬಂಧಪಟ್ಟಂತೆ ಬಿಲ್ ಮತ್ತು ವೆಚ್ಚದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಪಂಚಾಯತಿಯವರು ನೀಡಬೇಕೆಂದು ಉತ್ತರಿಸುತ್ತಾರೆ. ಪಂಚಾಯತಿಯವರೇ ನಿಪಿ6 ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪಂಚಾಯತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಬೋರ್ಡನ್ನು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವಾಗ ಬೋರ್ಡನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿ ದೂರು ಆದ ನಂತರ ಹಾಕಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ಮತ್ತು ಇತರೆ ಪ್ರತಿವಾದಿಗಳು ಸೇರಿ ಖಾಸಗಿ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಬೋರ್ಡನ್ನು ಹಾಕಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ತಂದೆಯ ಕಾಲದಿಂದಲೂ ದಾವಾಸ್ವತ್ತಿನಲ್ಲಿ

ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಪರಿಶೀಲಿಸದೇ ಯಾವ ವ್ಯಕ್ತಿಗೂ ಆಸ್ತಿಯನ್ನು ನೀಡುವುದಿಲ್ಲ ಎಂದರೆ ಸರಿಯಲ್ಲ. ವಾದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ವಾದಿ ನೀಡಿರುವ ದಾಖಲಾತಿಗಳಲ್ಲಿ ದಾವಾಸ್ತಿ ವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ವಾದಿ ದಾವಾಸ್ವತ್ತಿನ ಮಾಲೀಕರಾದ ಕಾರಣ ದಾಖಲಾತಿಗಳು ಆತನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನನಗೂ ಹಾಗೂ ದಾವಾಸ್ತಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ವಾದಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ

ನ್ಯಾಯಾಧೀಶರು, ಹುಣಸೂರು.